**International Journal of Humanities and Social Science Research**
**ISSN: 2455-2070; Impact Factor: RJIF 5.22**
**www.socialresearchjournals.com**
**Volume 2; Issue 8; August 2016; Page No. 83-87**

# ಹೈದ್ರಾಬಾದ್ ಸಂಸ್ಥಾನದಲ್ಲಿ ವಂದೇ ಮಾತರಂ ಚಳವಳಿ (1938–39)

**ಡಾ. ಪಿ. ನಾಗಭೂಷಣಗೌಡ**

ಉಪನ್ಯಾಸಕರು, ಇತಿಹಾಸ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

**Abstract**

ಭಾರತ ಸ್ವಾತಂತ್ರ್ಯ ಹೋರಾಟಕ್ಕಿಂತ ಭಿನ್ನವಾದ ಹೋರಾಟವನ್ನು ಕಂಡಿರುವ ಹೈದರಾಬಾದ್ ವಿಮೋಚನಾ ಸಂಗ್ರಾಮ, ಒಂದು ರೋಮಾಂಚಕಾರಿ ಕಥೆ. ಹೈದರಾಬಾದ ನಿಜಾಮನ ಆಡಳಿತದಿಂದ ಈ ಪ್ರದೇಶವನ್ನು ಮುಕ್ತಗೊಳಿಸಿ, ಜವಾಬ್ದಾರಿ ಸರಕಾರವನ್ನು ಸ್ಥಾಪಿಸಲು ಕಾಂಗ್ರೆಸ್, ಆರ್ಯ ಸಮಾಜ, ಸಿವಿಲ್ ಲಿಬರ್ಟೀಸ್ ಯೂನಿಯನ್ ಮುಂತಾದ ಸಂಘ–ಸಂಸ್ಥೆಗಳು ಹಲವಾರು ರೀತಿಯ ಉಗ್ರ ಹೋರಾಟ ನಡೆಸಬೇಕಾಯಿತು. ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಆರಂಭಿಸಿದ ವಂದೇ ಮಾತರಂ ಚಳವಳಿಯು ಸಂಸ್ಥಾನದಲ್ಲಿಯ ರಾಜಕೀಯ ಜಾಗೃತಿಗೆ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಿದ್ದನ್ನು ಕಾಣಬಹುದಾಗಿದೆ. ವಂದೇ ಮಾತರಂ ಚಳವಳಿಯು ಮುಂದೆ ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರರಾಗಿ ರೂಪುಗೊಂಡ ಯುವ ನಾಯಕರನ್ನು ಸೃಷ್ಟಿ ಮಾಡಿತು. ವಂದೇ ಮಾತರಂ ಒಂದು ಗೀತೆ. ಬಂಕಿಮಚಂದ್ರ ಚಟರ್ಜಿಯವರು ತಮ್ಮ ಸುಪ್ರಸಿದ್ಧ ಕಾದಂಬರಿ 'ಆನಂದಮಠ'ದಲ್ಲಿ ಅಳವಡಿಸಿದ್ದ ಅತ್ಯಂತ ವಿವಾದಾತ್ಮಕ ಗೀತೆ ಈ ವಂದೇ ಮಾತರಂ. (ಈ ಹಾಡನ್ನು ಆಕಾಶವಾಣಿ ಪ್ರತಿನಿತ್ಯ ಬೆಳಿಗ್ಗೆ ತನ್ನ ಕಾರ್ಯಕ್ರಮಗಳನ್ನು ಈ ಗೀತೆಯೊಂದಿಗೆ ಆರಂಭಿಸುವುದನ್ನು ಕೇಳದವರು ಇಲ್ಲ) ಸಾಹಿತ್ಯಕವಾಗಿ ಅದನ್ನು ಬೆಂಗಾಲಿಯಿಂದ ಅನುವಾದಿಸಿದರೆ "ಹೇ ತಾಯೇ ನಿನಗೆ ನಮಿಸುವೆ (ವಂದಿಸುವೆ), ನಮನಗಳು" ಎಂದಾಗುತ್ತದೆ. ಅಂದರೆ ತಾಯಿನಾಡಿಗೆ ಸಲ್ಲಿಸುವ ಪ್ರಣಾಮಗಳು. ಈ ಹಾಡನ್ನು ಹಾಡುವ ಬಗ್ಗೆ ನಡೆದ ಗೊಂದಲವೊಂದು ಬೃಹದಾಕಾರವಾಗಿ ಬೆಳೆದು ರಾಜಕೀಯ ಜಾಗೃತಿಗೆ ನಾಂದಿಯಾಯಿತು.

**Keywords:** ಆನಂದಮಠ, ಜವಾಬ್ದಾರಿ ಸರಕಾರ, ವಂದೇ ಮಾತರಂ, ನಿಜಾಮ, ರಾಜಕೀಯ ಜಾಗೃತಿ,

## Introduction

1938ರ ಅಕ್ಟೋಬರ್ ತಿಂಗಳಲ್ಲಿ ರಾಜಕೀಯ ವಿಚಾರಗಳು ಹೊರಹೊಮ್ಮಿ ಮೂರ್ತ ಸ್ವರೂಪವೊಂದನ್ನು ಪಡೆದ ಕಾರಣವಾಗಿ ಆ ತಿಂಗಳನ್ನು ಬದಲಾವಣೆ ತಂದ ತಿಂಗಳು ಎಂದು ಕರೆಯಬಹುದಾಗಿದೆ. ಆಗಿನ ಹೈದರಾಬಾದ್ ಸಂಸ್ಥಾನದ ರಾಷ್ಟ್ರೀಯತೆಯ ಬೆಳವಣಿಗೆ ಮತ್ತು ರಾಷ್ಟ್ರೀಯ ಚಳವಳಿಯ ಪ್ರಗತಿಯ ವಿಷಯದಲ್ಲಿ ಕೂಡಾ 1938ನೇ ಇಸವಿ ಒಂದು ಮೈಲಿಗಲ್ಲು ಎಂದು ಹೇಳಬಹುದು.

ಹೈದರಾಬಾದ್ ಸಂಸ್ಥಾನದಲ್ಲಿ ಚಳವಳಿ ಎರಡು ರಂಗಗಳಲ್ಲಿ ಕಾಣಿಸಿಕೊಂಡಿತು. ಒಂದೆಡೆ ಹೊಸದಾಗಿ ಸ್ಥಾಪಿತಗೊಂಡಿದ್ದ 'ಹೈದರಾಬಾದ್ ಸ್ಟೇಟ್ ಕಾಂಗ್ರೆಸ್' ಸಂವಿಧಾನಾತ್ಮಕ ಸುಧಾರಣೆಗಳನ್ನು ತರುವಂತೆ ಸರಕಾರದ ಮೇಲೆ ಒತ್ತಡ ಹೇರುತ್ತಿತ್ತು. ಇನ್ನೊಂದೆಡೆ ಕೋಮುವಾದಿ ಭಾರತೀಯ ಸಂಘಟನೆಗಳೆಂದು ಆಪಾದನೆಗೆ ಗುರಿಯಾಗಿದ್ದ ಆರ್ಯ ಸಮಾಜ ಮತ್ತು ಹಿಂದೂ ಮಹಾಸಭಾಗಳು ಜಂಟಿಯಾಗಿ ನಾಗರಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳ ಬೇಡಿಕೆಯನ್ನು ಮುಂದಿಟ್ಟಿದ್ದವು. ಈ ಹೋರಾಟಗಳು ನಿಜಾಮ ಸರಕಾರದ ಕಾನೂನುಗಳ ವಿರುದ್ಧ ನಡೆಸಿದ ಶಾಂತಿಯುತ ಹೋರಾಟಗಳೇ ಆಗಿದ್ದವು. ಆದರೆ ಸಂಸ್ಥಾನದಲ್ಲಿನ ಸ್ಥಿತಿ ಮಾತ್ರ ಬಹಳ ಸೂಕ್ಷ್ಮ ಮತ್ತು ಅಸ್ಥಿರತೆಯಿಂದ ಕೂಡಿತ್ತು. 1938 ರಲ್ಲಿ ನಡೆದ ಚಳವಳಿಗಳಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಹಿಂದೂ ವಿದ್ಯಾರ್ಥಿಗಳು ನಡೆಸಿದ 'ವಂದೇ ಮಾತರಂ' ಚಳವಳಿ ಅದ್ವಿತೀಯ.

ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಆರಂಭಿಸಿದ ವಂದೇ ಮಾತರಂ ಚಳವಳಿಯು ಸಂಸ್ಥಾನದಲ್ಲಿಯ ರಾಜಕೀಯ ಜಾಗೃತಿಗೆ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಿದ್ದನ್ನು ಕಾಣಬಹುದಾಗಿದೆ. ವಂದೇ ಮಾತರಂ ಚಳವಳಿಯು ಮುಂದೆ ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರರಾಗಿ ರೂಪುಗೊಂಡ ಯುವ ನಾಯಕರನ್ನು ಸೃಷ್ಟಿ ಮಾಡಿತು.

ವಂದೇ ಮಾತರಂ ಒಂದು ಗೀತೆ. ಬಂಕಿಮಚಂದ್ರ ಚಟರ್ಜಿಯವರು ತಮ್ಮ ಸುಪ್ರಸಿದ್ಧ ಕಾದಂಬರಿ 'ಆನಂದಮಠ'ದಲ್ಲಿ ಅಳವಡಿಸಿದ್ದ ಅತ್ಯಂತ ವಿವಾದಾತ್ಮಕ ಗೀತೆ ಈ ವಂದೇ ಮಾತರಂ. (ಈ ಹಾಡನ್ನು ಆಕಾಶವಾಣಿ ಪ್ರತಿನಿತ್ಯ ಬೆಳಿಗ್ಗೆ ತನ್ನ ಕಾರ್ಯಕ್ರಮಗಳನ್ನು ಈ ಗೀತೆಯೊಂದಿಗೆ ಆರಂಭಿಸುವುದನ್ನು ಕೇಳದವರು ಇಲ್ಲ) ಸಾಹಿತ್ಯಕವಾಗಿ ಅದನ್ನು ಬೆಂಗಾಲಿಯಿಂದ ಅನುವಾದಿಸಿದರೆ "ಹೇ ತಾಯೇ ನಿನಗೆ ನಮಿಸುವೆ (ವಂದಿಸುವೆ), ನಮನಗಳು" ಎಂದಾಗುತ್ತದೆ. ಅಂದರೆ ತಾಯಿನಾಡಿಗೆ ಸಲ್ಲಿಸುವ ಪ್ರಣಾಮಗಳು. ಈ ಹಾಡನ್ನು ಹಾಡುವ ಬಗ್ಗೆ ನಡೆದ ಗೊಂದಲವೊಂದು ಬೃಹದಾಕಾರವಾಗಿ ಬೆಳೆದು ರಾಜಕೀಯ ಜಾಗೃತಿಗೆ ನಾಂದಿಯಾಯಿತು.

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಎ, ಬಿ ಮತ್ತು ಟೆಂಪರರಿ ಎಂಬ ಮೂರು ಹಾಸ್ಟೆಲ್‌ಗಳಿದ್ದವು. ಪ್ರತಿಯೊಂದರಲ್ಲಿ ಒಂದು ಮುಸ್ಲಿಂ ವಿದ್ಯಾರ್ಥಿಗಳಿಗೆ, ಮತ್ತೊಂದು ಹಿಂದೂ ವಿದ್ಯಾರ್ಥಿಗಳಿಗೆಂದು ಪ್ರತ್ಯೇಕ ಪ್ರಾರ್ಥನಾ ಕೋಣೆಗಳಿದ್ದವು[1] ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳು ಪ್ರಾರ್ಥನೆ (ನಮಾಜ) ಸಲ್ಲಿಸುತ್ತಿದ್ದರು. ತರಗತಿಗಳು ಪ್ರಾರಂಭವಾಗುವ ಮುನ್ನ 'ತಹ್ತಾನಿಯಾ', (ಪ್ರಾಥಮಿಕ) 'ವಸ್ತಾನಿಯಾ' (ಮಾಧ್ಯಮಿಕ) ಮತ್ತು 'ಫೊಖಾನಿಯಾ'(ಪ್ರೌಢ)ಗೆ ಸೇರಿದ ವಿದ್ಯಾರ್ಥಿಗಳೆಲ್ಲರೂ (ಹಿಂದೂ ವಿದ್ಯಾರ್ಥಿಗಳು ಸೇರಿದಂತೆ) "ನಿಜಾಮ ಚಿರಾಯುವಾಗಲಿ"

ಎಂಬರ್ಥ ಬರುವ "ದೂ ಅಬ್ ಆತಮೆನ್ ಮೆಮ್ ರಿಯಾಸರ್ಬೆ" ಎಂದು ಸ್ತುತಿಸಬೇಕಿತ್ತು. ಈ ಸ್ತುತಿಗಾನ ಕೇವಲ ಶಾಲಾ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸರಕಾರಿ ಇಲಾಖೆಗಳಲ್ಲಿ ಕೂಡಾ ಹಾಡಲಾಗುತ್ತಿತ್ತು[2]

"ವಂದೇ ಮಾತರಂ" ಮತ್ತು "ನಿಜಾಮ ಚಿರಾಯುವಾಗಲಿ" ಈ ಎರಡೂ ಗೀತೆಗಳನ್ನು ತುಲನೆ ಮಾಡಿದ ವಿಶ್ವವಿದ್ಯಾಲಯದ 'ಬಿ' ಹಾಸ್ಟೆಲ್‌ನ ಹಿಂದೂ ವಿದ್ಯಾರ್ಥಿಗಳಿಗೆ ಮಾತೃಭೂಮಿ ಪ್ರೇಮದ ವಂದೇಮಾತರಂ ಭಕ್ತಿಪೂರ್ವಕವಾಗಿ ಕಾಣಿಸಿತು. ಆದ್ದರಿಂದ ಆ ವಿದ್ಯಾರ್ಥಿಗಳು ಕೆಲ ಸಮಯ ವಂದೇ ಮಾತರಂ ಗೀತೆ ಹಾಡುತ್ತಿದ್ದರು (ಅಸಫಜಾ 244).

ಈ ಹಾಡುವ ಪ್ರಕ್ರಿಯೆ ಹಾಗೇ ಸಾಗಿತ್ತು. ಆದರೆ 1938ರ ದಸರಾಕ್ಕಿಂತ ಮುಂಚೆ ಸೆಪ್ಟೆಂಬರ್ ತಿಂಗಳಲ್ಲಿ ಹಿಂದೂ ಪ್ರಾರ್ಥನಾ ಕೋಣೆಯಿಂದ ತಮಗೆ ಅಸಹಿಷ್ಣುವಾದದ್ದೇನೋ ನಡೆದಿದೆ ಎಂಬ ವಾಸನೆಯನ್ನು ಕೆಲವು ಮುಸ್ಲಿಂ ವಿದ್ಯಾರ್ಥಿಗಳು ಗ್ರಹಿಸಿದರೆಂದು ಹೇಳಲಾಗಿದೆ. ಒಂದು ದಿನ ಇದ್ದಕ್ಕಿದ್ದಂತೆ ತಮ್ಮ ಪ್ರಾರ್ಥನಾ ಕೊಠಡಿಗಳಲ್ಲಿ ವಂದೇ ಮಾತರಂ ಹಾಡದಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಯಿತು.

ಇಂತಹುದೇ ದೇಶಭಕ್ತಿಯ ಬಾಣ ಔರಂಗಾಬಾದಿನಲ್ಲಿ ಹೂಡಲ್ಪಟ್ಟಿತ್ತು. ಅಲ್ಲಿನ ಸರಕಾರಿ ಇಂಟರ್ ಮಿಡಿಯಟ್ ಕಾಲೇಜಿನಲ್ಲಿ ಶ್ರೀ.ಜಿ.ಎಂ.ಸರಾಫ ಅವರು ನೌಕರಿಗಿದ್ದು, ದೇಶಭಕ್ತಿಯನ್ನು ಬೆಳೆಸಿ ಪೋಷಿಸಿದ ದೇಶಭಕ್ತಿ ಪರ ಭಾವನೆಗಳಿಂದ, ಅಲ್ಲಿನ ವಿದ್ಯಾರ್ಥಿಗಳು ಶೀಘ್ರ ಎಚ್ಚೆತ್ತರು. ಸ್ವಾತಂತ್ರ್ಯದ ಪರ ತಮ್ಮದೂ ಕಾಣಿಕೆ ನೀಡಬೇಕೆನಿಸಿತ್ತು. ಅವರು ಬಂಡೇಳುವ, ತೀವ್ರವಾಗಿ ಸೆಟೆದೇಳುವ ಮನಸ್ಥಿತಿಯಲ್ಲಿದ್ದರು. ಅಸಫಿಯ ಗೀತೆಯನ್ನು ಹಾಡಲು ನಿರಾಕರಿಸಿದ ಅವರು ಅದಕ್ಕೆ ಬದಲಾಗಿ ರಾಷ್ಟ್ರೀಯ ಗೀತೆಯಾದ 'ವಂದೇ ಮಾತರಂ' ಹಾಡುವ ವಿಚಾರಕ್ಕೆ ಬೆಂಬಲ ಸೂಚಿಸಿದರು. ಒಂದು ದಿನ ಕೆಲ ಮುಸ್ಲಿಂ ತರುಣರ ಸಹಿತ ಇಡೀ ವಿದ್ಯಾರ್ಥಿ ಸಮುದಾಯವು ಅಸಫಿಯ ಗೀತೆಯನ್ನು ಹಾಡಲು ಒಪ್ಪದೆ 'ವಂದೇ ಮಾತರಂ' ಗೀತೆ ಹಾಡತೊಡಗಿದರು. ವಿದ್ಯಾರ್ಥಿ ಗೃಹಗಳಲ್ಲಿ ಇದೇ ಕತೆಯಾಗಿ ಸಂಸ್ಥಾನದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಕೂಡಾ ಈ ಕ್ರಮ ನಡೆಯಿತೆಂದು ಸ್ವಾಮಿ ರಮಾನಂದ ತೀರ್ಥರು ವಿಶ್ಲೇಷಿಸಿದ್ದಾರೆ[3] ಇತ್ತ ಉಸ್ಮಾನಿಯ ವಿ.ವಿ. 'ಬಿ' ಹಾಸ್ಟೆಲ್ಲಿನಲ್ಲಿ ವಾರ್ಡನ್ನನು ಪ್ರಾರ್ಥನಾ ಕೊಠಡಿಯನ್ನು ಮುಚ್ಚುವತ್ತ ಜಾಗೃತನಾದನು. ಇದರಿಂದ ವಿಚಲಿತರಾಗದ ವಿದ್ಯಾರ್ಥಿಗಳು ತಮ್ಮ ಧಾರ್ಮಿಕ ಪ್ರಾರ್ಥನೆಗಳನ್ನು ವಂದೇ ಮಾತರಂ ಸಹಿತವಾಗಿ ಪ್ರಾರ್ಥನಾ ಮಂದಿರದ ಹೊರಗಡೆ ಅಂಗಳದಲ್ಲೇ ಪೂರೈಸಿದರು[4]

ಇದೇ ವೇಳೆಗೆ ರಮಜಾನ್ ಹಬ್ಬದ ಪ್ರಯುಕ್ತ ವಿಶ್ವವಿದ್ಯಾಲಯದ ರಜೆ ಘೋಷಿಸಲಾಯಿತು. 1938ರ ನವೆಂಬರ್ 28ರಂದು ಮತ್ತೆ ಕಾಲೇಜು ಪ್ರಾರಂಭವಾದವು. ಪುನಃ ತರಗತಿಗೆ ಹಾಜರಾದ ವಿದ್ಯಾರ್ಥಿಗಳು ತಮ್ಮ ವಿರಾಮ, ವಿಶ್ರಾಂತಿಯ ಅವಧಿಯಲ್ಲಿ ಮತ್ತೆ ತಮಗೆ ಯಥಾಪ್ರಕಾರ ಪ್ರಾರ್ಥನೆ ಸಲ್ಲಿಸಲು ಅವಕಾಶ ಸಿಗುತ್ತದೋ ಇಲ್ಲವೋ ಎಂದು ತಮ್ಮಲ್ಲೇ ಗುಸುಗುಸು ಚರ್ಚಿಸುತ್ತಿದ್ದರು. ಅದೇ ದಿನ ಸಾಯಂಕಾಲ ಹಿಂದೂ ವಿದ್ಯಾರ್ಥಿಗಳಿಗೆ ಒಂದು ನೋಟಿಸನ್ನು ಹೊರಡಿಸಲಾಗಿತ್ತು. "ದಿನಾಂಕ 28ರ ನಂತರ ಹಿಂದೂ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಹಾಸ್ಟೆಲ್ಲುಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡುವುದನ್ನು ನಿಷೇದಿಸಲಾಗಿದೆ" ಎಂದು ನೋಟಿಸಿನಲ್ಲಿ ಸೂಚಿಸಲಾಗಿತ್ತು[5]

ಯಾವಾಗ ಅಧಿಕಾರಿಗಳು ಮತ್ತು ವಾರ್ಡನ್ ಹಾಡುವುದನ್ನು ನಿಲ್ಲಿಸುವಂತೆ ಆದೇಶಿಸಿದರೋ ಯುವಕರಲ್ಲಿ ಸ್ವಾಭಾವಿಕವಾಗಿ ಬರುವಂತೆ ಆಕ್ರೋಶವಾಗಿ ಆದೇಶವನ್ನು ತಿರಸ್ಕರಿಸಿದರು. ಆದೇಶವು ನಿರಂಕುಶತೆ ಮತ್ತು ಪಕ್ಷಪಾತದ ಪ್ರತೀಕವೆಂದು ಬಗೆದ ಅವರು ಆದೇಶವನ್ನು ಉಲ್ಲಂಘಿಸಲು ನಿರ್ಧರಿಸಿದರು[6] ಹಿಂದೂ ವಿದ್ಯಾರ್ಥಿಗಳು ಸಂವಿಧಾನಾತ್ಮಕ ವಿಧಾನವನ್ನು ಅನುಸರಿಸಿ ತಮ್ಮ ತಮ್ಮ ಹಾಸ್ಟೆಲ್ ವಾರ್ಡನ್‌ಗಳ ಮೂಲಕ ಸಮಕುಲಪತಿಗಳಿಗೆ ಮನವಿಯೊಂದನ್ನು ಸಲ್ಲಿಸಿದರು. ಹಾಸ್ಟೆಲ್‌ನಲ್ಲಿ ಕೋಮು ಸಾಮರಸ್ಯವಿದ್ದು ಈಗ ನೀಡಿರುವ ಆದೇಶವನ್ನು ಹಿಂಪಡೆದು, ನಿರ್ಬಂಧವನ್ನು ತೆಗೆದುಹಾಕುವಂತೆ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮನವಿ ಮಾಡಿದರು. ಆದರೆ ಈ ಆದೇಶವು ಕಾರ್ಯಕಾರಿ ಸಮಿತಿಯಿಂದ ಹೊರಡಿಸಿದ್ದು ಎಂದು ಹೇಳುವ ಮೂಲಕ ಸಮಕುಲಪತಿಗಳು ವಿದ್ಯಾರ್ಥಿಗಳಿಗೆ ನಕಾರಾತ್ಮಕವಾಗಿ ಸ್ಪಂದಿಸಿದರು. ವಿದ್ಯಾರ್ಥಿಗಳು ಪಟ್ಟು ಬಿಡದೆ ವಂದೇ ಮಾತರಂ ಸಹಿತ ಪ್ರಾರ್ಥನೆ ಸಲ್ಲಿಸಿದ್ದರು.

ಮಾರನೇ ದಿನ ಅಂದರೆ 1938ರ ನವೆಂಬರ್29 ರಂದು ಸಮಕುಲಾಧಿಪತಿಗಳ ಆದೇಶ ಉಲ್ಲಂಘಿಸಿದ್ದಕ್ಕಾಗಿ ಲಿಖಿತ ಕ್ಷಮಾಪಣೆ ಕೇಳಬೇಕೆಂದು ಮತ್ತು ವಂದೇ ಮಾತರಂ ಹಾಡುವುದಿಲ್ಲ ಎಂದು ವಚನ ಕೊಡಬೇಕೆಂದು ವಿದ್ಯಾರ್ಥಿಗಳಿಗೆ ಸೂಚಿಸಲಾಯಿತು. ಅಲ್ಲದೆ ಮುಂದಿನ ಆದೇಶ ಬರುವವರೆಗೆ ಹಿಂದೂ ವಿದ್ಯಾರ್ಥಿಗಳು ತಮ್ಮ ರೂಮುಗಳನ್ನು ಬಿಟ್ಟು ಹೊರಬರಬಾರದೆಂಬ ಇನ್ನೊಂದು ಆದೇಶವೂ ಇತ್ತು ಎನ್ನಲಾಗಿದೆ. ವಿದ್ಯಾರ್ಥಿಗಳು ಲಿಖಿತ ಕ್ಷಮಾಪಣೆ ಕೇಳುವ ಮನಸ್ಥಿತಿಯಲ್ಲಿರಲಿಲ್ಲ. 29ನೇ ತಾರೀಕು ಸಾಯಂಕಾಲವೇ ಮತ್ತೊಂದು ಆದೇಶ ಹೊರಬಿತ್ತು. ಅದರಲ್ಲಿ ಹೀಗಿತ್ತು– "ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ವಂದೇ ಮಾತರಂ ಹಾಡಬಾರದೆಂಬ ಆದೇಶವನ್ನು ಕೆಲವು ವಿದ್ಯಾರ್ಥಿಗಳು ಉಲ್ಲಂಘಿಸಿದ್ದು ಅವರ ಹೆಸರುಗಳನ್ನು ಹಾಸ್ಟೆಲ್‌ಗಳು ಮತ್ತು ತರಗತಿಗಳಿಂದ ತೆಗೆದು ಹಾಕಲಾಗಿದೆ. ಅವರಿಗೆ ನೀಡಿದ್ದ ಸ್ಕಾಲರ್‌ಷಿಪ್ ಮತ್ತು ವಿನಾಯ್ತಿಗಳನ್ನು ರದ್ದುಗೊಳಿಸಲಾಗಿದೆ".

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಕಾಲೇಜು ವಿದ್ಯಾರ್ಥಿಗಳ ಸಮವಸ್ತ್ರ ನೀಲಿ ಶೇರ್ವಾನಿ ಮತ್ತು ಪಾಯಿಜಾಮ ಬಹುಸಂಖ್ಯೆಯ ಹಿಂದೂ ವಿದ್ಯಾರ್ಥಿಗಳಿಗೆ ಅಸಹನೀಯವಾಗಿತ್ತು. ಬಿಳಿ ಅಂಗಿ ಮತ್ತು ಧೋತಿಯನ್ನು ಧರಿಸುವ ತಮ್ಮ ಮನದಿಚ್ಛೆಯನ್ನು ಸಮಕುಲಪತಿಗಳಲ್ಲಿ ಅರುಹಿದರು. "ಅರಸನ ಸಂಸ್ಕೃತಿಯನ್ನು ಅನುಸರಿಸಬೇಕು, ಇಲ್ಲದಿದ್ದರೆ ಕಾಲೇಜು ತೊರೆಯಬೇಕು" ಎಂದು ಹೇಳುವ ಮೂಲಕ ವಿದ್ಯಾರ್ಥಿಗಳ ಮನವಿಯನ್ನು ತಿರಸ್ಕರಿಸಿದರು.

ಇಷ್ಟೇ ಅಲ್ಲದೆ ಹಿಂದೂ ವಿದ್ಯಾರ್ಥಿಗಳು ಹಿಂದೂಯೇತರ ಲೇಖಕರು ಬರೆದಿದ್ದ ಪುಸ್ತಕಗಳನ್ನು ಮುಸ್ಲಿಂ ವಿದ್ಯಾರ್ಥಿಗಳು ಮುಸ್ಲಿಂ ಲೇಖಕರು ಬರೆದಿದ್ದ ಪುಸ್ತಕಗಳನ್ನು ಓದಬೇಕಾಗಿದ್ದ ಅಖ್ಲಿಯತ್ ತಮಗಿರುವುದು ಹಿಂದೂ ವಿದ್ಯಾರ್ಥಿಗಳಿಗೆ ಸರಿಬರಲಿಲ್ಲ. ಅದೂ ಅಲ್ಲದೆ ಅರೇಬಿಕ್, ಪರ್ಷಿಯನ್ ಮತ್ತು ಉರ್ದುವಿಗಾಗಿ ಸ್ನಾತಕೋತ್ತರ ತರಗತಿಗಳಿದ್ದು ಅಂತಹ ಯಾವ ತರಗತಿ ಸಂಸ್ಕೃತ, ತೆಲುಗು, ಮರಾಠಿ ಹಾಗೂ ಕನ್ನಡಕ್ಕಾಗಿ ಇಲ್ಲ ಎಂದು ಹಿಂದೂ ವಿದ್ಯಾರ್ಥಿಗಳು ನೋವಿನಿಂದ ವ್ಯಕ್ತಪಡಿಸಿದ್ದರು.

ವಂದೇ ಮಾತರಂ ಚಳವಳಿಗೆ ಹಲವಾರು ಕಾರಣಗಳು ಪ್ರೇರಕವಾಗಿ ಹೊರ ಹೊಮ್ಮಿದ್ದು ಕಂಡು ಬರುತ್ತದೆ. ವಿದ್ಯಾರ್ಥಿಗಳ ಚಳವಳಿ

ಹೈದರಾಬಾದ್ ಸಂಸ್ಥಾನದ ಹೊರಗೆ ಕೂಡಾ ಗಮನ ಸೆಳೆಯುತ್ತದೆ. ಮಹಾತ್ಮಾ ಗಾಂಧಿಯವರು "ಪ್ರಾರ್ಥನಾ ಕೊಠಡಿಗಳಲ್ಲಿ ಈ ಗೀತೆ ಹಾಡುವ ಎಲ್ಲ ಹಕ್ಕನ್ನು ವಿದ್ಯಾರ್ಥಿಗಳು ಹೊಂದಿದ್ದಾರೆ" ಎನ್ನುವ ಭರವಸೆಯ ನುಡಿಗಳನ್ನಾಡುತ್ತಾರೆ. ಸುಭಾಸ್ ಚಂದ್ರಭೋಸ್ ಅವರು "ಯಾವ ಪರಿಸ್ಥಿತಿಯಲ್ಲೂ ತಲೆಬಾಗಬೇಡಿ, ಸರಕಾರ ಮಣಿಯುತ್ತದೆ" ಎಂದರು. ವಿದ್ಯಾರ್ಥಿಗಳ ನಿರ್ಧಾರವನ್ನು ನೆಹರೂ ಸ್ವಾಗತಿಸುತ್ತಾರೆ. ವಿನಾಯಕ ಸಾವರ್ಕರ್ ಅವರೂ ಸ್ಪಂದಿಸಿದರು.

1938ರ ನವೆಂಬರ್ 29ರಂದು ವಿದ್ಯಾರ್ಥಿಗಳನ್ನು ವಿಶ್ವ ವಿದ್ಯಾಲಯದಿಂದ ಅಮಾನತ್ತುಗೊಳಿಸಿದ ಆದೇಶವನ್ನು ಸಮಕುಲಪತಿಗಳು ಹೊರಡಿಸಿ ಎಲ್ಲರೂ ತಕ್ಷಣ ಹಾಸ್ಟೆಲ್ ಕೊಠಡಿಗಳನ್ನು ತೆರವುಗೊಳಿಸುವಂತೆ ಸೂಚಿಸುತ್ತಾರೆ. ತಮ್ಮ ಹಾಸ್ಟೆಲ್‌ಗಳನ್ನು ರಾತ್ರಿಯೇ ಬಿಟ್ಟು ಹೊರಡಬೇಕೆಂದು ಹಿಂದೂ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯವೆಸಗಲಾಯಿತು.[7]

ಸಮಕುಲಪತಿಗಳಾದ ಡಾ.ಮೆಕೆಂಜೀಯವರ ಅವಧಿಯಲ್ಲಿ ವಿದ್ಯಾರ್ಥಿಗಳು ಗೊಂದಲಕ್ಕೀಡಾದರು. ಪೊಲೀಸ್ ಅವಶ್ಯಕತೆ ಇರದಿದ್ದರೂ ವಿದ್ಯಾರ್ಥಿಗಳ ಹರತಾಳಗಳಿಂದಾಗಿ ವಿಶ್ವವಿದ್ಯಾಲಯದ ಇಡೀ ಆವರಣದಲ್ಲಿ ಲಾಠಿಸಮೇತ ಪೊಲೀಸರನ್ನು ನಿಯೋಜಿಸಲಾಯಿತು. ಸ್ನೇಹಿತರುಗಳು ಈ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಒತ್ತಾಯಪಡಿಸಿ ನಗರದ ಸುಲ್ತಾನಬಜಾರ ಮತ್ತು ಜೈನ ಮಂದಿರಗಳಲ್ಲಿ ಆಶ್ರಯ ಪಡೆಯುವಂತೆ ಮನವೊಲಿಸಿದರು. ಹಿಂದೂ ವಿದ್ಯಾರ್ಥಿಗಳ ನಿರಂತರ ಸಂಪು ಜರುಗಿತು. ಜಿಲ್ಲೆಗಳಲ್ಲಿ ಸಭೆಗಳು ಜರುಗಿ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟು ರಾಜ್ಯಾದ್ಯಂತ ಹಿಂದೂ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಯಿತು.

ವಿಶ್ವವಿದ್ಯಾಲಯದ ಅಧಿಕಾರಿಗಳು 6ನೇ ಬಹಮನ್ 48 ಫ ತಾರೀಕಿನೊಳಗೆ[8] ಕ್ಷಮಾಪಣೆ ಪತ್ರ ಸಲ್ಲಿಸಿ ಯಥಾಪ್ರಕಾರ ತರಗತಿಗಳಿಗೆ ಹಾಜರಾಗುವಂತೆ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದರು. ಆದರೆ ವಿದ್ಯಾರ್ಥಿಗಳು 10ನೇ ತಾರೀಕು ತರಗತಿಗಳಿಗೆ ಹಾಜರಾಗದೆ ಇರುವ ಮೂಲಕ ಅಧಿಕಾರಿಗಳನ್ನು ನಿರುತ್ಸಾಹಗೊಳಿಸಿದರು. ಆದಾಗ್ಯೂ ಅಧಿಕಾರಿಗಳು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಇನ್ನೊಂದು ದಿನ ಕೂಡಾ (11–ಡಿಸೆಂಬರ್–1938) ಕಾದರು. ಆದರೆ ವಿದ್ಯಾರ್ಥಿಗಳು ಮಾತ್ರ ತರಗತಿಗೆ ಹಾಜರಾಗಲಿಲ್ಲ.

ಹೀಗಾಗಿ 1938ರ ಡಿಸೆಂಬರ್ 12ನೇ ತಾರೀಕು ಉಸ್ಮಾನಿಯಾ ವಿಶ್ವವಿದ್ಯಾಲಯ ಕಾಲೇಜಿನಿಂದ 350 ವಿದ್ಯಾರ್ಥಿಗಳ ಹೆಸರನ್ನು ಹೊಡೆದು ಹಾಕಲಾಯಿತು. ಅದೇ ದಿನ ಸಿಟಿ ಕಾಲೇಜಿನ 70 ವಿದ್ಯಾರ್ಥಿಗಳು, ಕಲಬುರಗಿ ಕಾಲೇಜಿನ (ಪ್ರೌಢಶಾಲೆ ಸೇರಿದಂತೆ) 310 ವಿದ್ಯಾರ್ಥಿಗಳು ಹಾಗೂ ಮೆಹಬೂಬನಗರ (ನಗರದ ಮೊದಲ ಹೆಸರು ಪಲಮೂರು) ಪ್ರೌಢಶಾಲೆಯ 210 ವಿದ್ಯಾರ್ಥಿಗಳನ್ನು ಆಯಾ ಸಂಸ್ಥೆಗಳಿಂದ ತೆಗೆದು ಹಾಕಲಾಯಿತು. ಔರಂಗಾಬಾದ್, ನಾಂದೇಡ್, ಬೀದರ್ ಹಾಗೂ ಪರಭಣಿ ಜಿಲ್ಲೆಗಳಲ್ಲಿ ಸತತ ಚಳವಳಿ ನಡೆದು ಹಳ್ಳಿಗಳಿಗೂ ವಿಸ್ತರಿಸಲ್ಪಟ್ಟಿತು.

ವಿದ್ಯಾರ್ಥಿಗಳಿಂದ ಕಾಲೇಜುಗಳ ಬಾಯ್ಕಟ್ ಮುಂದುವರೆಯಿತು. ಅನೇಕ ಕಡೆ ಹರತಾಳಗಳು ನಡೆದವು. ಬಂಧನಕ್ಕೊಳಗಾಗುವಾಗ ಕೂಡಾ ಅತ್ಯಂತ ಉತ್ಸಾಹಭರಿತರಾಗಿ ವಂದೇಮಾತರಂ ಹಾಡುತ್ತಿದ್ದರು.[9] ಹೈದರಾಬಾದ್ ಸಂಸ್ಥಾನದ ಜೈಲುಗಳು ಭರ್ತಿಯಾಗತೊಡಗಿದವು. ಜೈಲಿನ ಗೋಡೆಗಳು ವಂದೇ ಮಾತರಂ ಗೀತೆಯಿಂದ ಪ್ರತಿಧ್ವನಿಸುತ್ತಿದ್ದವು. ಜೇಲುವಾಸಿಗಳನ್ನು ಸುಮ್ಮನಿರಿಸಲಾಗಲಿಲ್ಲ. ಹೀಗಾಗಿ ಅವರ ಮೇಲೆ ಛಡಿಯೇಟುಗಳು ಪ್ರಾರಂಭವಾದವು. ಇದು ಜೈಲುಗಳಲ್ಲಿ ಉಪವಾಸ ಸತ್ಯಾಗ್ರಹಕ್ಕೆ ನಾಂದಿಯಾಯಿತು. ಮೂರು ದಿನಗಳ ಉಪವಾಸ ಸತ್ಯಾಗ್ರಹದ ನಂತರ ರಾತ್ರಿ ಮಲಗುವ ಮುನ್ನ ವಂದೇಮಾತರಂ ಹಾಡಲು ಅವಕಾಶ ನೀಡಲಾಯಿತು. ಆದರೆ ದಿನಪೂರ್ತಿ ಹಾಡುವಂತಿರಲಿಲ್ಲ. ಕೆಲದಿನಗಳ ಅನಿಶ್ಚಿತತೆಯ ನಂತರ ಈ ಭಾಗದ ಯಾವ ವಿಶ್ವ ವಿದ್ಯಾಲಯಗಳೂ ವಿದ್ಯಾರ್ಥಿಗಳ ದುರವಸ್ಥೆಯ ಬಗ್ಗೆ ಕಿಂಚಿತ್ತು ಕಾಳಜಿಯನ್ನೂ ತೋರದಾದಾಗ ಅಂತಿಮವಾಗಿ ಈ ಬಹಿಷ್ಕೃತ ವಿದ್ಯಾರ್ಥಿಗಳು ನಾಗಪುರದಲ್ಲಿ ಶೈಕ್ಷಣಿಕ ಆಶ್ರಯ ಪಡೆದರು. ಇನ್ನು ಕೆಲವರು ಜಬಲ್ಪುರಕ್ಕೆ ಕೂಡಾ ಹೋದರು.

ಶೈಕ್ಷಣಿಕ ಆಶ್ರಯವೇನೋ ದೊರೆಯಿತು. ಆದರೆ ಆ ಸ್ಥಳಗಳಲ್ಲಿ ಇವರ ಊಟೋಪಚಾರಕ್ಕೆ ಸರಿಯಾದ ಅನುಕೂಲತೆಗಳಿಲ್ಲದೆ ಈ ಧೀರ ತರುಣರು ಬಹಳಷ್ಟು ತೊಂದರೆ ಪಡಬೇಕಾಯಿತು. ಹೈದರಾಬಾದಿನ ಶ್ರೀಮಂತರು ಇದಕ್ಕಾಗಿ ಧನ ಸಂಗ್ರಹಿಸಿ ನೆರವಾದರು. ವಿದ್ಯಾರ್ಥಿಗಳೂ ಬಂಡೆಯಂತೆ ದೃಢಚಿತ್ತರಾಗಿದ್ದರು. ಮುಂದಿನ ದಿನಗಳಲ್ಲಿ ಅಧಿಕಾರಿಗಳು ಹಿಂದಿನ ಆದೇಶವನ್ನು ಹಿಂಪಡೆದು ವಂದೇ ಮಾತರಂ ಹಾಡಗೊಟ್ಟರು

ಒಟ್ಟಾರೆಯಾಗಿ ವಿಶ್ವವಿದ್ಯಾಲಯ ಮತ್ತು ಅದರ ಸಂಲಗ್ನ ಕಾಲೇಜುಗಳಿಂದ 1200 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊರಹಾಕಲಾಗಿತ್ತು). ಹೊರ ಹಾಕಲ್ಪಟ್ಟ ವಿದ್ಯಾರ್ಥಿಗಳಲ್ಲಿ ಪಿ.ವಿ.ನರಸಿಂಹರಾವ್ (ಮುಂದೆ ಭಾರತದ ಪ್ರಧಾನಮಂತ್ರಿಗಳಾದರು) ಹಯಗ್ರೀವಾಚಾರಿ, ಅರುತ್ಲರಾಮಚಂದ್ರರೆಡ್ಡಿ, ದೇವುಲಪಲ್ಲಿ ವೆಂಕಟೇಶ್ವರರಾವ್, ನೂಕಲ ರಾಮಚಂದ್ರ ಸೇರಿದ್ದರು. ಮುಂದೆ ಇವರೆಲ್ಲ ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಮಹತ್ವದ ಪಾತ್ರವಹಿಸಿದರು. ಬಿ.ಧರ್ಮಭಿಕ್ಷಂ ಅವರು ಕೂಡಾ ವಂದೇ ಮಾತರಂ ಚಳವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು 1938ರ ಈ ಮಹಾನ್ ಚಳವಳಿಯ ಪರಿಣಾಮ ಏನಾಗುತ್ತೋ ಗೊತ್ತಿರದ ವಿದ್ಯಾರ್ಥಿಗಳು ಮಹತ್ತರ ನಿರ್ಧಾರ ತೆಗೆದುಕೊಂಡಿದ್ದರು. ಆ ಗಂಭೀರ ಪರಿಣಾಮದ ಭಯ ಯಾವುದೂ ಇರಲಿಲ್ಲ.[10]

ಕರ್ನಾಟಕದ ವಿದ್ಯಾರ್ಥಿಗಳು 1938ರ ನವೆಂಬರ್ 30ರಂದೇ ನಿಜಾಮ ಸರಕಾರದ ವಿರುದ್ಧ ಚಳವಳಿ ಪ್ರಾರಂಭಿಸಿದರು. ಜಗನ್ನಾಥರಾವ್ ಚಂಡ್ರಕಿ, ಶಿವಮೂರ್ತಿ ಸ್ವಾಮಿ ಅಳವಂಡಿ (ಮುಂದೆ ಸಂಸದರಾದರು), ನಾರಾಯಣ ಕನಿಹಾಳ, ವಿ.ಪಿ.ದೇವುಳಗಾಂವಕರ, ಸರ್ದಾರ್ ಶರಣಗೌಡ ಇನಾಂದಾರ್, ಚನ್ನಬಸಪ್ಪ ಕುಳಗೇರಿ, ಗೋಪಾಲರಾವ್ ಆದೋನಿ, ದಾಸಪ್ಪ. ಆರ್ ಎಂ.ಗಂಗಾವತಿ, ವಿರೂಪಾಕ್ಷಪ್ಪ, ಜಯತೀರ್ಥ ರಾಜ ಪುರೋಹಿತರಂತಹ ಅನೇಕ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಇವರು ಉಸ್ಮಾನಿಯಾ ವಿಶ್ವವಿದ್ಯಾಲಯ, ಗುಲ್ಬರ್ಗದ ಇಂಟರ್ ಮಿಡಿಯೇಟ್ ಕಾಲೇಜು ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಾಗಿದ್ದರು. ಕೊಪ್ಪಳದ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಾದ ಇಟ್ಟಗಿ ವಿರುಪಾಕ್ಷಪ್ಪ, ಕುಮಾರಯ್ಯ, ಅಂದಾನೆಪ್ಪ ಕೋಲೂರು, ವೀರಪ್ಪ ಮೆಣಸಿನಕಾಯಿ ಮತ್ತು ಬಂಗಾರಶೆಟ್ಟಿ ಅವರು ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದರು.[11]

ಕಾಲೇಜುಗಳಿಂದ ಹೊರಹಾಕಲ್ಪಟ್ಟ ವಿದ್ಯಾರ್ಥಿಗಳು ಬಸ್ ನಿಲ್ದಾಣಗಳಲ್ಲಿ ಪಿಕೆಟಿಂಗ್ ಪ್ರಾರಂಭಿಸಿದರು. ಕೆಲವೇ ಸಮಯದಲ್ಲಿ ಹೈದರಾಬಾದಿನ ನಗರದ ಮತ್ತು ಹಲವು ಜಿಲ್ಲೆಗಳ ಕಾಲೇಜುಗಳು ಜಾಗೃತಗೊಂಡವು. ಈ ಪ್ರತಿಭಟನೆಗಳಿಗೆ ಎಲ್ಲೆಡೆ ಸಹಾನುಭೂತಿಯೂ ವ್ಯಕ್ತವಾಯಿತಲ್ಲದೆ ಸಂಸ್ಥಾನದ ಹೊರಗಡೆಯೂ ಹರಡಿತು. ಬಹಳ ದಿನಗಳ ಕಾಲ ಇದು ಕೇವಲ ಹಿಡಿಯಷ್ಟು

ಪ್ರತಿಭಟನಾನಿರತ ವಿದ್ಯಾರ್ಥಿಗಳು ಹಾಡೊಂದನ್ನು ಹಾಡುವ ಹಕ್ಕಿನ ಪ್ರಶ್ನೆಯಾಗಿ ಉಳಿಯಲಿಲ್ಲ. ವಂದೇ ಮಾತರಂ ಪ್ರತಿರೋಧದ ಪ್ರತೀಕವಾಯ್ತು.[12]

ಗುಲ್ಬರ್ಗ ತಾಲ್ಲೂಕು ಮಹಾಗಾಂವ ಗ್ರಾಮದ ಚಂದ್ರಶೇಖರ ಪಾಟೀಲರು ಧೈರ್ಯಶಾಲಿ ಮುಂದಾಳು. ಅವರು ಮುಂದಾಳತ್ವ ವಹಿಸಿ ಮುಂಬಯಿ ಪ್ರಾಂತ್ಯದ ಮೂಲಕ ಔರಂಗಾಬಾದ ಸಮೀಪದ ವೈಜಾಪುರದಿಂದ ಸತ್ಯಾಗ್ರಹಿಗಳ ತಂಡವೊಂದನ್ನು ಹೊರಡಿಸಿದರು. ಅತ್ಯಂತ ಉತ್ಸಾಹದಿಂದ "ವಂದೇ ಮಾತರಂ" ಎಂದು ಜಯಘೋಷ ಮಾಡುತ್ತ ನಿಜಾಮ ಸಂಸ್ಥಾನದ ಒಳ ಪ್ರವೇಶಿಸಿತು. ಮುಂದಾಳು ಚಂದ್ರಶೇಖರ ಪಾಟೀಲರು 'ವಂದೇ ಮಾತರಂ' ಹಾಡಿದರು. ಅವರ ಮೇಲೆ ರಾಜದ್ರೋಹದ ಆರೋಪ ಹೊರಿಸಿದ ನಿಜಾಮ ಸರಕಾರ (1938ರ ನವೆಂಬರ್ ಕೊನೆಗೆ) ಬಂಧಿಸಿ ವೈಜಾಪುರ ಜೈಲಿನಲ್ಲಿಟ್ಟಿತು.

### ವಂದೇ ಮಾತರಂ ರಾಮಚಂದ್ರರಾವ್

ಜೈಲಿನಲ್ಲಿದ್ದಾಗ ಪೊಲೀಸರು ಕ್ರೂರವಾಗಿ ಹೊಡೆದಾಗ ಪ್ರತಿಯೊಂದು ಹೊಡೆತ ಬಿದ್ದಾಗಲೂ ವಂದೇ ಮಾತರಂ ಎಂದು ಘೋಷಿಸಿದ ಆರ್ಯ ಸಮಾಜದ ಸ್ವಯಂಸೇವಕ ಇತಿಹಾಸ ನಿರ್ಮಿಸಿದ. ಆತ ತನ್ನ ಕಾರಾಗೃಹವಾಸದ ಅವಧಿಯಲ್ಲಿ ಪ್ರಾರ್ಥನೆಯ ವೇಳೆ ವಂದೇ ಮಾತರಂ ಹಾಡುತ್ತಿದ್ದ. ಜೈಲು ಅಧಿಕಾರಿಗಳ ದೃಷ್ಟಿಯಲ್ಲಿ ಅದು ಒಂದು ಅಪರಾಧ. ಆದ್ದರಿಂದ ಆತನನ್ನು ಅಂಗಳಕ್ಕೆ ಕರೆದುಕೊಂಡು ಬಂದ ಅವರು ಹೀನಾಯವಾಗಿ ಥಳಿಸಲಾರಂಭಿಸಿದರು. ಪ್ರತಿಯೊಂದು ಹೊಡೆತ ಬಿದ್ದಾಗಲೂ ಆತ ವಂದೇ ಮಾತರಂ ಎನ್ನುತ್ತಿದ್ದ. ಅತಿಯಾದ ರಕ್ತಸ್ರಾವವಾಗಿ ಎಚ್ಚರತಪ್ಪಿ ಬೀಳುವವರೆಗೂ ಅಧಿಕಾರಿಗಳು ಹೊಡೆಯುವುದನ್ನು ಬಿಡಲಿಲ್ಲ. ಆದಾಗ್ಯೂ ಆತ ವಂದೇ ಮಾತರಂ ಎನ್ನುವುದನ್ನು ಬಿಡಲಿಲ್ಲ. ಪಂಡರಾಪುರದಲ್ಲಿ ಸಮಾವೇಶವೊಂದನ್ನು ಸಂಘಟಿಸಿದ ವೀರಸಾವರ್ಕರ್, ಆತನಿಗೆ 'ವಂದೇ ಮಾತರಂ ರಾಮಚಂದ್ರರಾವ್' ಎಂಬ ಬಿರುದನ್ನು ನೀಡಿದರು[13] ಅವರೇ ಆಂಧ್ರಪ್ರದೇಶದ ಅಧಿಕೃತ ಭಾಷಾ ಆಯೋಗದ ಮಾಜಿ ಅಧ್ಯಕ್ಷರಾದ ವಂದೇ ಮಾತರಂ ರಾಮಚಂದ್ರರಾವ್.

ಕೇವಲ 1200 ವಿದ್ಯಾರ್ಥಿಗಳಿಗೆ ಈ ಚಳವಳಿ ಸಂಬಂಧಿಸಿದ್ದರೂ ಇಡೀ ಹೈದರಾಬಾದ್ ಸಂಸ್ಥಾನದಲ್ಲಿ ವಂದೇ ಮಾತರಂ ಚಳವಳಿ ಅತ್ಯಂತ ತೀವ್ರವಾಗಿತ್ತು. 1939ರಲ್ಲಿ ಜನ ಧೈರ್ಯದಿಂದ ಸುಸಂಘಟಿತರಾಗಿ ರಜಾಕಾರರ ವಿರುದ್ಧ ಕೈಯಲ್ಲಿ ಲಾಠಿ ಹಿಡಿದು ಊರಲ್ಲಿ ಪ್ರಭಾತಫೇರಿ ನಡೆಸುವುದು, ವಂದೇ ಮಾತರಂ ಘೋಷಣೆ ಹಾಕುವುದು ಮಾಡತೊಡಗಿದರು. ಒಂದೆಡೆ ರಜಾಕಾರರ ದೌರ್ಜನ್ಯ ಇನ್ನೊಂದೆಡೆ ಅದಕ್ಕೆ ಪ್ರತಿಯಾಗಿ ಮತ್ತೆ ಮತ್ತೆ ಘೋಷಣೆ ಕೂಗುವುದು ದಿನನಿತ್ಯದ ಮಾತಾಯಿತು. ಒಂದು ರೀತಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ಬೀದಿ ಕಾಳಗವಾಗಿ ಹೋಯಿತು. ಆಗ ಕೂಲಿಕಾರರು, ನೇಕಾರರು, ಹಮಾಲರು, ಗಾಡಿ ಹೊಡೆಯುವವರು, ಗಂಜ್‌ನಲ್ಲಿ ಕೆಲಸ ಮಾಡುತ್ತಿದ್ದ ವಿವಿಧ ವರ್ಗದ ಜನರು ಹೀಗೆ ಘೋಷಣೆ ಕೂಗುತ್ತ ಒಂದು ಹಾಡನ್ನೇ ರಚಿಸಿದರು. ಇದನ್ನು ಯಾರೊಬ್ಬರು ರಚಿಸದೆ ಹಲವಾರು ಜನರೇ ಹಾಡುತ್ತ ಹಾಡುತ್ತ ಅದಕ್ಕೊಂದು ರೂಪ ಕೊಟ್ಟರು.[14]

ಛೀನ ಸಕ್ತಿ ಹೈ ನಹೀ
ಸರಕಾರ ವಂದೇ ಮಾತರಂ
ಹಮ್ ಗರೀಬೋಂಕಾ ಗಲೇಕಾ
ಹಾರ ವಂದೇ ಮಾತರಂ

ಹಾಥ ಮೇ ಬೇಡೀ ಗಲೇ ಮೇ
ಭೋಂಕ್‌ದೇ ಸೂಲಿ ಚಢಾ
ಪರ್‌ನ ಛೋಡೇಂಗೆ ಕಭೀ ಹಮ್
ಮಂತ್ರ ವಂದೇ ಮಾತರಂ

ಮಂತ್ರ ವಂದೇ ಮಾತರಂ ಹೈ
ತಂತ್ರ ವಂದೇ ಮಾತರಂ
ಹಮ್ ಗರೀಬೋಂಕಾ ಗಲೇಕಾ
ಹಾರ ವಂದೇ ಮಾತರಂ

ಛೀನ ಸಕ್ತಿ ಹೈ ನಹೀ
ಸರಕಾರ ವಂದೇ ಮಾತರಂ
ಹಮ್ ಗರೀಬೋಂಕಾ ಗಲೇಕಾ
ಹಾರ ವಂದೇ ಮಾತರಂ

ಬಂಕಿಮ ಚಂದ್ರರ ವಂದೇ ಮಾತರಂನಿಂದ ಆರಂಭವಾದ ಈ ಹೋರಾಟ ವಿವಿಧ ರೂಪ ಪಡೆಯುತ್ತ ಕನ್ನಡ ನಾಡಿನ ಜನರು ಉರ್ದು ಭಾಷೆಯಲ್ಲಿ ಇನ್ನೊಂದು ಪದ ಕಟ್ಟಿ ವಂದೇ ಮಾತರಂ ಚಳವಳಿಯನ್ನು ಮುನ್ನಡೆಸಿದರು. ಈ ಹಾಡಿನ ಕನ್ನಡ ರೂಪ ಹೀಗೀದೆ:–

ಸರಕಾರ ಕಸಿಯಲು ಸಾಧ್ಯವಾಗದು
ಇದೋ ವಂದೇ ಮಾತರಂ
ಬಡವರೆಲ್ಲರ ಕೊರಳ ಹಾರವು
ನಮ್ಮ ವಂದೇ ಮಾತರಂ

ಕೈಗೆ ಬೇಡಿ ಹಾಕಿ ಚೂರಿಯ
ಕತ್ತಿಗೆ, ನೇಣುಗಂಬಕೆ ತೂಗಲಿ
ಆದರೂ ನಾವೆಂದಿಗೂ
ನಿಲ್ಲಿಸೆವು ವಂದೇ ಮಾತರಂ

ಮಂತ್ರ ವಂದೇ ಮಾತರಂ
ತಂತ್ರ ವಂದೇ ಮಾತರಂ
ಬಡವರೆಲ್ಲರ ಕೊರಳ ಹಾರವು
ನಮ್ಮ ವಂದೇ ಮಾತರಂ

ಸರಕಾರ ಕಸಿಯಲು ಸಾಧ್ಯವಾಗದು
ಇದೋ ವಂದೇ ಮಾತರಂ
ಬಡವರೆಲ್ಲರ ಕೊರಳ ಹಾರವು
ನಮ್ಮ ವಂದೇ ಮಾತರಂ

ನಿಜಾಮ ಮತ್ತು ರಜಾಕಾರರ ದಬ್ಬಾಳಿಕೆ ಹಾಗೂ ದುಷ್ಕೃತ್ಯಗಳ ವಿರುದ್ಧ ಹೋರಾಡಿ ಹೈದರಾಬಾದ್ ಸಂಸ್ಥಾನವನ್ನು 18–09–1948ರಂದು[15] ಸ್ವತಂತ್ರ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸುವಲ್ಲಿ ವಂದೇ ಮಾತರಂ ಚಳವಳಿ ನಿಜಕ್ಕೂ ಪ್ರೇರಕ ಶಕ್ತಿಯಾಗಿತ್ತು. ಭಾರತದ ವಿದ್ಯಾರ್ಥಿ ಚಳವಳಿಯ ಇತಿಹಾಸದಲ್ಲಿ ವಂದೇ ಮಾತರಂ ಅದ್ವಿತೀಯ ಚಳವಳಿ. ಇದು ನಿಜಾಮ ಸಾಮ್ರಾಜ್ಯದ ಕೋಟೆಯನ್ನು ಭೇದಿಸಿತು. ಅಸಫಜಾ ಗೀತೆಯನ್ನು ಹಾಡುವುದರಿಂದ ಹೈದರಾಬಾದಿನ ಜನರನ್ನು ಮುಕ್ತಿಗೊಳಿಸಿತು.

### ಕೊನೆ ಟಿಪ್ಪಣಿಗಳು

1. ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ಶರಣಗೌಡ ಇನಾಂದಾರ

ಅವರೊಡನೆ ಸಂದರ್ಶನ, ಕಲಬುರಗಿಯ ಅವರ ಮನೆಯಲ್ಲಿ. 1998
2. ಸ್ವಾಮಿ ರಮಾನಂದ ತೀರ್ಥ, ಹೋರಾಟದ ನೆನಪುಗಳು, ಪು.103. ಈ ಪ್ರಾರ್ಥನೆಯು ಉರ್ದು ಮಿಶ್ರಿತ ಪರ್ಶಿಯನ್ ಭಾಷೆಯಲ್ಲಿತ್ತು.
3. ಅದೇ, ಪು.103–104
4. ರೇಗಾನಿ ಸರೋಜಿನಿ, ಹೈಲೈಟ್ಸ್ ಆಫ್ ದಿ ಫ್ರೀಡಂ ಸ್ಟ್ರಗಲ್ ಇನ್ ಆಂದ್ರಪ್ರದೇಶ್, ಆಂಧ್ರಪ್ರದೇಶ ಸರ್ಕಾರ, 1972, ಪು.185
5. ರಾಜೇಂದ್ರಪ್ರಸಾದ. ಅಸಿಫ್ ಝಾಸ್ ಆಫ್ ಹೈದ್ರಾಬಾದ್– ದೇರ್ ರೈಸ್ ಆ್ಯಂಡ್ ಫಾಲ್, ವಿಕಾಸ್ ಪಬ್ಲಿಷಿಂಗ್ ಪ್ರೈ.ಲಿ, ದೆಹಲಿ, 1984, ಪು.138.
6. ರಾಜೇಂದ್ರಪ್ರಸಾದ. ಪು.244.
7. ರಾಜೇಂದ್ರಪ್ರಸಾದ, ಪು.139.
8. ಅಂದರೆ 1938 ರ ಡಿಸೆಂಬರ್ 10 ನೇ ತಾರೀಕು
9. ಬಿ.ಸಿ. ಮಹಾಬಲೇಶ್ವರಪ್ಪ, ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಪ್ರಸಾರಾಂಗ, ಗುಲಬರ್ಗಾ ವಿ.ವಿ, 1997, ಪು.97.
10. ಕೆ.ಎಂ. ಮುನ್ಶಿ., ದಿ ಎಂಡ್ ಆಫ್ ಆ್ಯನ್ ಎರಾ, ಭಾರತೀಯ ವಿದ್ಯಾಭವನ, ಮುಂಬೈ, 1957, ಪು.25
11. ಬಿ.ಸಿ. ಮಹಾಬಲೇಶ್ವರಪ್ಪ, ಮೇಲಿನದೇ, ಪು.96
12. ರಾಜೇಂದ್ರಪ್ರಸಾದ. ಮೇಲಿನದೇ, ಪು.255.
13. ನಾಗಭೂಷಣಗೌಡ ಪಿ, ಪ್ರಿನ್ಸ್ಲಿ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದ್ರಾಬಾದ್, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಗುಲಬರ್ಗಾ ವಿ.ವಿ., ಕಲಬುರಗಿ, 2000
14. ಜಿಲ್ಲಾ ಆಡಳಿತ ಕೊಪ್ಪಳ, ವಿಮೋಚನೆ, ಕೊಪ್ಪಳ, ನವೆಂಬರ್ 1999, ಪು.262–63
15. ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, 3–4–1995 ಪು.3–8. ಕರ್ನಾಟಕ ಸರ್ಕಾರವು ಪ್ರತಿವರ್ಷ ಸೆಪ್ಟೆಂಬರ್ 17ರಂದು ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನವನ್ನಾಗಿ ಆಚರಿಸುತ್ತಿದ್ದು ಹಲವರು ಅಧಿಕೃತವಾಗಿ 18 ನಿಜವಾದ ವಿಮೋಚನಾ ದಿನ ಎಂದು ಬೇಡಿಕೆ ಸಲ್ಲಿಸಿದ್ದಾರೆ. ಆದರೆ ಹೈದ್ರಾಬಾದ್ ಸಂಸ್ಥಾನದಲ್ಲಿ ತ್ರಿರಂಗ ಧ್ವಜ ಅಧಿಕೃತವಾಗಿ ಹಾರಾಡಿದ್ದು ಸೆಪ್ಟೆಂಬರ್ 20 ರಂದು.